ಅಸಲು ದಾವೆ ಸಂಖ್ಯೆ -283/2014
ಪಿ.ಡಬ್ಲ್ಯು - 01
ದಿನಾಂಕಃ 29-01-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ ಎಸ್ ಎಂ ವಕೀಲರಿಂದ**

2 ರಿಂದ 4 ನೇ ವಾದಿಯರು ನಿಮಗೆ ಯಾವುದೇ ರೀತಿಯ ಒಟ್ಟು ವಿಶೇಷ ಮುಕ್ತಿಯಾರ ಪತ್ರವನ್ನು ನೀಡಿರುವುದಿಲ್ಲ ಎಂದರೆ ನೀಡಿರುತ್ತಾರೆ. ಸದರಿ ಮೋಕ್ತಿಯಾರ ಪತ್ರದಲ್ಲಿ ಅವರ ಸಹಿಯನ್ನು ನೀವೆ ಮಾಡಿಕೊಂಡಿರುತ್ತೀರಿ ಎಂದರೆ ಸುಳ್ಳು ಇರುತ್ತದೆ. ನಿಮ್ಮ ಮಗನಿಗೆ ನೀವು ಒಬ್ಬರೇ ಪ್ರತ್ಯೇಕವಾಗಿ ವಿಶೇಷ ಮುಕ್ತಿಯಾರ ಪತ್ರವನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ಅದನ್ನು ಎಲ್ಲಿ ತಯಾರಿ ಮಾಡಿಸಿರುತ್ತೀರಿ ಎಂದರೆ ಸವಣೂರಿನ ಸ್ಟ್ಯಾಂಪ ವೆಂಡರ್ ಬಳಿ. ಸದರಿ ಮುಕ್ತಿಯಾ ಪತ್ರದ ಆಧಾದರ ಮೇಲೆ ನಿಮ್ಮ ಮಗ ಶಿವಯೋಗಿ ಸಾಕ್ಷಿ ಹೇಳಲು ಬಂದಿದ್ದಾ ಎಂದರೆ ಸರಿ. ನಿಮ್ಮ ಮಗನಿಗೆ ನೀವು ಒಟ್ಟು ಮುಕ್ತಿಯಾರ ಪತ್ರವನ್ನು ನೀಡಬೇಕಾದರೆ ಯಾರು ಹಾಜರಿದ್ದರು ಎಂದರೆ ನಾನು ಮತ್ತು ನನ್ನ ಮಗ ಮಾತ್ರ ಇದ್ದೆವು. ಸಾಕ್ಷಿಧಾರರು ಯಾರು ಇರಲಿಲ್ಲ. ನಿಮ್ಮ ಸಹೋದರ ಸಿದ್ದಲಿಂಗ ಯಾವಾಗ ತೀರಿಕೊಂಡರು ಎಂದರೆ ದಿಃ 08-08-2010 ರಲ್ಲಿ.

ದಾವಾ ಆಸ್ತಿಯ ಖಾತಾ ಬದಲಾವಣೆಗೆ ಪ್ರತಿವಾದಿಗೆ ಯಾವುದೇ ನೋಟಿಸನ್ನು ತಹಶೀಲ್ದಾರ ರವರು ನೀಡಿರುವುದಿಲ್ಲ ಎಂದರೆ ನೀಡಿರುತ್ತಾರೆ. ದಾವಾ ಆಸ್ತಿಯ ಖಾತಾ ಬದಲಾವಣೆಯನ್ನು ದಿಃ 05-10-2013 ರಂದು ಮಾಡಿಕೊಂಡಿರುತ್ತೀರಿ ಎಂದರೆ ಸರಿ. ದಿಃ 05-10-2013 ರಂದು 1 ನೇ ವಾದಿ ಹೆಸರಿನಲ್ಲಿ ಮತ್ತು ಸಿದ್ದಲಿಂಗಪ್ಪ ಹಾವಣಗಿ ಹೆಸರಿನಲ್ಲಿ ಮಾತ್ರ ಖಾತೆ ಬದಲಾವಣೆ ಮಾಡಿಕೊಂಡಿದ್ದೀರಿ ಎಂದರೆ ಸರಿ. ದಿಃ 08-08-2010 ರಂದು ಸಿದ್ದಲಿಂಗಪ್ಪ ಪೋತಿ ಆಗಿದ್ದರು ಸಹ ಅವರ ಹೆಸರನ್ನು ಏಕೆ ಸೇರಿಸಿದ್ದೀರಿ ಎಂದರೆ ಅವರ ಹೆಸರು ಭಕ್ಷಿಸ ಪತ್ರದಲ್ಲಿ ಇದುದ್ದರಿಂದ ಹೆಸರನ್ನು ಸೇರಿಸಿರುತ್ತೇವೆ. ಹಾಗಾದರೆ ಅವರ ವಾರಸುದಾರರನ್ನು ಏಕೆ ಸೇರಿಸಲಿಲ್ಲ ಎಂದರೆ ಸಾಕ್ಷಿಯು ತಡಬಡಾಯಿಸುತ್ತಾ ಯಾವುದೇ ಉತ್ತರ ನೀಡಿರುವುದಿಲ್ಲ.

ದಿಃ 14-04-1966 ರಂದು ಭಕ್ಷಿಸ ಪತ್ರ ಆಗಿದ್ದು ಆಗುವ ಮುಂಚೆ ದಾವಾ ಆಸ್ತಿಯು ಯಾರ ಹೆಸರಿನಲ್ಲಿ ಇತ್ತು ಎಂದರೆ ನಿಂಗಪ್ಪ ಶಿವಪ್ಪ ಹಾವಣಗಿ ರವರ ಹೆಸರಿನಲ್ಲಿ

ಇತ್ತು. ದಿಃ 01-08-1965 ರಂದು ದಾವಾ ಆಸ್ತಿ ಮತ್ತು ಸರ್ವೆ ನಂ. 127, 96/2 ನ್ನು ನಿಂಗಪ್ಪ ರವರ ಹೆಸರಿನಲ್ಲಿ ಇದ್ದು, ಅವರು ನೀಡಿದ ವರದಿಯ ಪ್ರಕಾರ ದಾವಾ ಆಸ್ತಿ ಮತ್ತು ಸರ್ವೆ ನಂ. 127 ಪಂಚಪ್ಪ ಹೆಸರಿಗೆ ದಾಖಲಿಸಿದ್ದು ಮತ್ತು ಸರ್ವೆ ನಂ. 96/2 ನ್ನು ಮುರಿಗೆಪ್ಪ ರವರ ಹೆಸರಿಗೆ ದಾಖಲಿಸಿರುತ್ತಾರೆ ಎಂದರೆ ಅದು ಖೊಟ್ಟಿ ದಾಖಲೆ ಇರುತ್ತದೆ. ಅದೇ ರೀತಿ ಮುರಿಗೆಪ್ಪ, ಫಕ್ಕೀರಪ್ಪ, ಪಂಚಪ್ಪ, ತೋಟಪ್ಪ ಮತ್ತು ನಿಮ್ಮ ತಂದೆಯವರಾದ ಚನ್ನಬಸಪ್ಪ ರವರಿಗೂ ಸಹ ವರದಿ ಮುಖಾಂತರವೇ ಆಸ್ತಿ ಬದಲಾವಣಿ ಆಗಿರುತ್ತದೆ ಎಂದರೆ ಸರಿ.

ದಿಃ 15-10-1965 ನಿಮ್ಮ ತಂದೆಯವರು ನಿಂಗಪ್ಪ ಮತ್ತು ಮುರಿಗೆಪ್ಪನವರ ಹೆಸರಿಗೆ ಖಾತೆ ಬದಲಾವಣೆ ಮಾಡಬಾರದು ಏಕೆಂದರೆ ಅವರಿಗೆ ಬುದ್ಧಿ ಸ್ವಾಧಿನದಲ್ಲಿ ಇಲ್ಲ ಎಂದು ತಕರಾರನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಸುಧೀರ್ಘವಾಗಿ ನಡೆದು ದಿಃ 06-09-1966 ರಂದು ಅಧಿಕಾರಿಗಳು ಆದೇಶ ಹೊರಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶ ಮಾಡುವ ಪೂರ್ವದಲ್ಲಿ ನಿಮ್ಮ ತಂದೆಯವರು ದಾವಾ ಆಸ್ತಿ ಮತ್ತು ಇನ್ನೆರಡು ಆಸ್ತಿಗಳು ನಮ್ಮ ಮಕ್ಕಳಿಗೆ ಭಕ್ಷಿಸ ಆಗಿದೆ ಎಂದು ಹೇಳಿದ್ದರು ಎಂದರೆ ಸರಿ. 1966 ರಲ್ಲಿ ಆದ ಆದೇಶದ ಪ್ರಕಾರ ಯೋಗ್ಯ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಿ ಎಂದು ಹೇಳಿದ್ದು ಅದನ್ನು ನೀವು ಯಾವ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ 2012 ರಲ್ಲಿ ಪ್ರಶ್ನಿಸಿರುತ್ತೇನೆ.

2012 ರ ತನಕ ದಾವಾ ಆಸ್ತಿ ಮತ್ತು ಸರ್ವೆ ನಂ. 127 ಪಂಚಪ್ಪನ ಮಾಲ್ಕಿ ಮತ್ತು ಕಬ್ಜಾ ಆಸ್ತಿಗಳಾಗಿದ್ದವು ಎಂದರೆ ಅದು ನಮ್ಮ ವಹಿವಾಟಿನಲ್ಲಿ ಇದ್ದವು, ನಿಮ್ಮ ವಹಿವಾಟಿನಲ್ಲಿ ಇದ್ದವು ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.